THE SOCIAL SCIENCE DIALOGUE

*Vol. 2, No. 2, Jul-Dec, 2022* *ISSN 2583-0708*

KUVEMPU UNIVERSITY
THE SOCIAL SCIENCE DIALOGUE
Peer Reviewed Open Access Journal
Prasaranga, Kuvempu University

# ಕೊರೊನಾ ಎಂಬ ಮಾಹಿತಿಮಾರಿ: ಸಾಮಾಜಿಕ ಮಾಧ್ಯಮಗಳ ವಿಶ್ವಾಸಾರ್ಹತೆಯ ವಿಶ್ಲೇಷಣೆ

**ವಿನಯ್ ಜಿ. ಪಿ.** ಸಂಶೋಧನಾರ್ಥಿ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ– 577 451, ಶಿವಮೊಗ್ಗ, ಕರ್ನಾಟಕ. E-mail: vinaygpa@gmail.com

**ಸತ್ಯಪ್ರಕಾಶ್ ಎಂ. ಆರ್**. ಸಹ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ– 577 451, ಶಿವಮೊಗ್ಗ, ಕರ್ನಾಟಕ. E-mail: mrs@kuvempu.ac.in

---

***ಸಾರಾಂಶ:*** *ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳ ಮಿತಿಗಳನ್ನು ಮೀರಿದ ಹೊಸಬಗೆಯ ಸಂವಹನ, ಬಹುಮಾಧ್ಯಮ ವಿಷಯವಸ್ತು ಪ್ರಸ್ತುತಿ, ತತ್‌ಕ್ಷಣ ಪ್ರತಿಕ್ರಿಯೆ ನೀಡಬಲ್ಲ ಅವಕಾಶಗಳನ್ನು ಹೊತ್ತುತಂದದ್ದು ನವಮಾಧ್ಯಮ. ವಿಶೇಷತೆಗಳಿಂದಲೇ ಬಳಕೆದಾರರಿಗೆ ಅಪ್ಯಾಯಮಾನವಾದ ಈ ಸಾಮಾಜಿಕ ಮಾಧ್ಯಮ(*Social media*)ದಲ್ಲಿ ಹರಿದಾಡುವ ಮಾಹಿತಿಗಳ ಮೂಲ, ವಿಶ್ವಾಸರ್ಹತೆ ಮತ್ತು ಹೊಣೆಗಾರಿಕೆಗಳ ಅವಶ್ಯಕತೆ, ಪ್ರಾಮುಖ್ಯತೆ ಬಗ್ಗೆ ಬಹುತೇಕರಿಗೆ ಕಾಳಜಿ ಇರಲಿಲ್ಲ. 2020ರ ಆರಂಭದಲ್ಲಿ ಕೋವಿಡ್19 ಮಹಾಮಾರಿ ಜಗತ್ತಿನಾದ್ಯಂತ ಹರಿಡಿದಾಗ ಪ್ರತಿಯೊಬ್ಬರ ಆದ್ಯತೆಯಾದ ಆರೋಗ್ಯ ಕಾಳಜಿ ಜಾಗೃತವಾದದ್ದೇನೊ ಸರಿ. ಜನಸಾಮಾನ್ಯರು ತತ್‌ಕ್ಷಣದ ಮಾಧ್ಯಮದಲ್ಲಿ ತಮ್ಮ ಅಭಿಪ್ರಾಯಗಳನ್ನು, ಓದಿದ್ದು, ಕೇಳಿದ್ದನ್ನು ಆತಂಕದಿಂದಲೇ ಹಂಚಿಕೊಂಡು ಅವು ಅರೆಸತ್ಯ, ಸುಳ್ಳುಸುದ್ದಿಗಳಾಗಿ ಸುಶಿಕ್ಷಿತರನ್ನು ಕಾಡಿದ್ದು ನವಮಾಧ್ಯಮದ ವ್ಯಾಪ್ತಿ ಮತ್ತು ಪ್ರಭಾವವನ್ನು ಎತ್ತಿತೋರಿಸಿತು. ಕೊರೊನಾದ ಮೊದಲ ಅಲೆಯ ಸಂದರ್ಭದಲ್ಲಿ ರಾಷ್ಟ್ರೀಯ– ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಮಾಜಿಕ ಜಾಲತಾಣಗಳು ಹಾಗೂ ಕೆಲವು ಮುಖ್ಯವಾಹಿನಿ ಟಿವಿವಾಹಿನಿಗಳಲ್ಲಿ ಹರಿದಾಡಿದ ಸುಳ್ಳುಸುದ್ದಿಗಳ ಹಿನ್ನೆಲೆ, ಜನಾಂಗೀಯತೆ, ಜಾತಿ–ಧರ್ಮಾಧಾರಿತ ಪಕ್ಷಪಾತಿತನ, ಇದರಿಂದಾದ ಹಾನಿ ಹಾಗೂ ಅವುಗಳನ್ನು ತಡೆಯುವಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಕುರಿತು ಇಲ್ಲಿ ವಿಶ್ಲೇಷಿಸಲಾಗಿದೆ.*

**ಮುಖ್ಯಪರಿಕಲ್ಪನೆಗಳು:** ನವಮಾಧ್ಯಮ, ಸಾಮಾಜಿಕ ಜಾಲತಾಣಗಳು, ಸುಳ್ಳುಸುದ್ದಿ, ವಿಶ್ವಾಸಾರ್ಹತೆ